





ಉತ್ತರ ಧ್ರುವದ ಆರ್ಕ್ಟಿಕ್ ವೃತ್ತದಲ್ಲಿ ಬರುವ ಐಸ್‌ಲ್ಯಾಂಡ್, ಅಲಾಸ್ಕಾ, ಕೆನಡಾ, ನಾರ್ವೆ, ಸ್ವೀಡನ್, ಫಿನ್‌ಲ್ಯಾಂಡ್, ಗ್ರೀನ್‌ಲ್ಯಾಂಡ್ ದೇಶಗಳಲ್ಲಿ ಈ ವಿದ್ಯಮಾನವನ್ನು ನೋಡಬಹುದು. ಇತ್ತ ಸೌತ್‌ಪೋಲ್‌ನಲ್ಲಿ ಕೂಡ ಕೆಲವೆಡೆ ಕಾಣಬಹುದಾದರೂ, ಈ ನಾರ್ದರ್ನ್ ಲೈಟ್ ಪಡೆದಷ್ಟು ಪ್ರಸಿದ್ಧಿ ಅದಕ್ಕಿಲ್ಲ. ಆದರೆ, ಈಗ ಈ ಸೌತ್‌ಪೋಲ್ ಆಗಸ ಕೂಡ ಅಪರಿಮಿತ ಬೆಡಗಿನ ರಂಗಮಂಚವಾಗಿ ಅಮೆರಿಕ, ಆಸ್ಟ್ರೇಲಿಯಾ, ಲಂಡನ್, ಯೂರೋಪ್ ದೇಶಗಳ ನಗರದ ನಾಗರಿಕರೂ ಕಾಣುವಂತಾಗಿದೆ.

ಬಹಳ ಹಿಂದೆ, ಉತ್ತರಧ್ರುವ ತಾಣಗಳಲ್ಲಿ ವಾಸಿಸುವ ಬುಡಕಟ್ಟು ಜನರಲ್ಲಿ ಈ ಬೆಳಕಿನ ನರ್ತನದ ಕುರಿತು ಬಹಳಷ್ಟು ಮೂಢನಂಬಿಕೆಯ ಕಥೆಗಳು ಹುಟ್ಟಿಕೊಂಡಿದ್ದವು. ಹಿರಿಯರ ಆತ್ಮಗಳು ಬಂದು ಆಗಸದಲ್ಲಿ ಆಟವಾಡುತ್ತಿರುವರೆಂದು, ಹುಟ್ಟುತ್ತಲೇ ಸತ್ತ ಮಕ್ಕಳ ಆತ್ಮಗಳು ಬಂದು ಆಡುತ್ತಿವೆಯೆಂದು, ಹಿರಿಯರ ಆತ್ಮಗಳು ನಮ್ಮೊಡನೆ ಮಾತನಾಡಲು ಬಂದಿವೆಯೆಂದು, ಬೇಟೆಯಾಡಿದ ಪ್ರಾಣಿಗಳ ಆತ್ಮಗಳು ತಮ್ಮನ್ನು ಹೆದರಿಸಲು ಬಂದಿವೆಯೆಂದು, ಪಿಶಾಚಿಗಳು ಕಳೆದುಹೋದ ಆತ್ಮಗಳನ್ನು ಹುಡುಕುತ್ತಿವೆಯೆಂದು, ಉತ್ತರದ ಬುಡಕಟ್ಟಿನವರು ತಾವು ಸಂಹರಿಸಿದ ಶತ್ರುಗಳನ್ನು ದೊಡ್ಡ ಕಡಾಯಿಯಲ್ಲಿ ಹಾಕಿ ಅಗ್ನಿ ಉರಿಸಿ ಸುಡುತ್ತಿರುವರೆಂದು, ತಮಗೇನೋ ಕೇಡಾಗಲಿದೆಯೆಂದು ಭವಿಷ್ಯ ಹೇಳುತ್ತಿರುವ ದೇವದೂತನೆಂದು– ಹೀಗೆ, ಬೆಳಕಿನ ಚಮತ್ಕಾರದ ಸುತ್ತ ರೂಪುಗೊಂಡಿದ್ದ ನಂಬಿಕೆಗಳಿಂದ ಜನ ಭಯಭೀತರಾಗುತ್ತಿದ್ದರು, ತಂತ್ರಮಂತ್ರಗಳ ಮೊರೆ ಹೋಗುತ್ತಿದ್ದರು.

ವಿಜ್ಞಾನ ಪ್ರವರ್ಧಮಾನಕ್ಕೆ ಬಂದು, ಬಣ್ಣ ಬೆಳಕಿನಾಟದ ನಿಗೂಢತೆಯನ್ನು ವಿಜ್ಞಾನಿಗಳು ಬಿಡಿಸಿಟ್ಟರು. ಪ್ರಸಿದ್ಧ ವಿಜ್ಞಾನಿ ಗೆಲಿಲಿಯೋ, ಈ ವಿದ್ಯಮಾನಕ್ಕೆ ‘ನಾರ್ದರ್ನ್ ಲೈಟ್ಸ್’ ಎಂದು ಹೆಸರು ಕೊಟ್ಟನು.

ಈ ಬೆಳಕಿನ ವಿಲಾಸವನ್ನು ಕಾಣುವ ಕಣ್ಣುಗಳ ಭಾಗ್ಯ ನಿಜಕ್ಕೂ ದೊಡ್ಡದೇ. ಆದರೆ, ಇದನ್ನು ನೋಡಲೆಂದೇ ಉತ್ಕಟೇಚ್ಛೆಯಲ್ಲಿ ಹೋದವರಿಗೂ ಕಂಡೇ ಕಾಣುವುದೆಂಬ ಭರವಸೆಯಿಲ್ಲ. ಅದರಲ್ಲೂ ಪ್ರವಾಸಿಗಳಾಗಿ ಒಂದೆರಡು ದಿನಗಳಿಗೆ ಹೋದವರು ಸಾವಿರಾರು ರೂಪಾಯಿಗಳನ್ನು ವ್ಯಯಿಸಿ ಅಲ್ಲಿ ಹೋದರೂ, ಅಂದು ಈ ವಿದ್ಯಮಾನ ಘಟಿಸದಿರಬಹುದು. ಹೇಳಿಕೇಳಿ ಪ್ರಕೃತಿ; ಅದು ಯಾವಾಗ ಏನು ರೂಪ ತೋರಿಸಬಹುದು ಎಂದು ಅಂದಾಜು ಮಾಡಲಾದೀತೇ? ಅದೃಷ್ಟ ಜೊತೆಗಿದ್ದರಷ್ಟೇ ಇದನ್ನು ಕಾಣಲು ಸಾಧ್ಯ.

ಅರೋರಾ ಘಟಿಸುವ ದೇಶಗಳಲ್ಲಿ ಹವಾಮಾನ ಅನುಸರಿಸಿಯೇ ‘ಅರೋರಾ ಟ್ರಿಪ್’ ಎಂದು ವಿಶೇಷ ಪ್ರವಾಸ ಯೋಜಿಸುತ್ತಾರೆ. ನೋಡಲೇಬೇಕೆಂಬ ಹಂಬಲದವರು ನಾಲ್ಕಾರು ದಿನ ಉಳಿದು, ಟೆಂಟ್ ಹಾಕಿ ಕಾಯುತ್ತಾ ಕೂರುತ್ತಾರೆ – ಮನೋಹರ, ಅತ್ಯದ್ಭುತ ಕ್ಷಣಗಳಿಗಾಗಿ!

ಪ್ರತಿಕ್ರಿಯಿಸಿ: **feedback@sudha.co.in**